ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 28-35.
©*IIMRD*, Mysuru
IIMRD JOURNALS
www.iimrd.com

# ದಲಿತ ಆತ್ಮಕಥೆಗಳ ಸಾಂಸ್ಕೃತಿಕ ನೆಲೆಗಳು

**ಪುಷ್ಪಲತ. ಎಸ್* ಮತ್ತು ಪ್ರೊ. ಡಿ. ವಿ. ಪರಮಶಿವಮೂರ್ತಿ****

*ಸಂಶೋಧನಾ ವಿದ್ಯಾರ್ಥಿ ಮತ್ತು **ಮಾರ್ಗದರ್ಶಕರು
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

***ಸಾರಾಂಶ:* (Abstract)**

*ಪ್ರಪಂಚದಲ್ಲಿ ಭಾರತ ದೇಶವು ಪ್ರಾಚೀನ ಕಾಲದಿಂದಲೂ ಹಲವಾರು ಧರ್ಮ, ಜನಾಂಗ, ಜಾತಿ, ಪಂಗಡ, ಪಂಥಗಳಿಗೆ ಜನ್ಮ ನೀಡಿರುವ ತಾಣವಾಗಿದೆ. ಅದರಂತೆ ಇಲ್ಲಿ ಹಲವಾರು ಧರ್ಮಗಳು ಆಶ್ರಯವನ್ನು ಪಡೆದುಕೊಂಡಿವೆ. ವಿವಿಧ ಧರ್ಮಗಳ ಪ್ರಭಾವದಿಂದ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ವಿಭಿನ್ನ ರೀತಿಯ ನಂಬಿಕೆಗಳು, ಆಚರಣೆಗಳು, ನಡವಳಿಕೆಗಳು, ಸಂಪ್ರದಾಯಗಳನ್ನು ಕಾಣಬಹುದಾಗಿದೆ. ಈ ರೀತಿಯಲ್ಲಿ ನೋಡುವುದಾದರೆ ದಲಿತ ಸಮುದಾಯವು ಕೂಡ ಒಂದಾಗಿದೆ. ದಲಿತರು ಆಚರಿಸುವ ಸಂಪ್ರದಾಯಗಳು ಮತ್ತು ಆಚಾರ ವಿಚಾರಗಳು ಬೇರೆ ಸಮುದಾಯದವರ ಸಂಪ್ರದಾಯ ಮತ್ತು ಆಚಾರ ವಿಚಾರಗಳಿಗಿಂತ ವಿಭಿನ್ನವಾಗಿರುವುದನ್ನು ದಲಿತ ಆತ್ಮಕಥೆಗಳನ್ನು ಅಧ್ಯಯನ ಮಾಡಿದಾಗ ತಿಳಿದುಬರುತ್ತದೆ.*

**ಮುಖ್ಯಪದಗಳು (Keywords):** *ದಲಿತ, ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಆತ್ಮಕಥೆ.*

## ಪೀಠಿಕೆ

ಭಾರತದಲ್ಲಿ ಪ್ರತಿಯೊಂದು ಸಮುದಾಯದವು ಕೂಡ ತನ್ನದೇಯಾದ ಆಚಾರ, ವಿಚಾರ, ನಂಬಿಕೆ, ರೂಢಿ ಸಂಪ್ರದಾಯಗಳನ್ನು ಹೊಂದಿವೆ. ಈ ನಂಬಿಕೆಗಳಿಗೆ ಧಕ್ಕೆಯಾದಾಗ ಪ್ರತಿಯಾಗಿ ಪ್ರತಿರೋಧ ವ್ಯಕ್ತಪಡಿಸುತ್ತಾನೆ. ಕವಿಯ ವೈಯಕ್ತಿಕ ಹಿತಾಸಕ್ತಿಗೆ ಧಕ್ಕೆ ಬಂದಾಗ ತನ್ನ ಧರ್ಮದ ಹೆಗ್ಗಳಿಕೆಯನ್ನು ಎತ್ತಿ ಹಿಡಿಯುವ ಸಂದರ್ಭಗಳಲ್ಲಿ ಧರ್ಮ, ಜಾತಿ, ರಾಜತ್ವದ ಬಗ್ಗೆ ತಮಗಿರುವ ಬೇಸರವನ್ನು ಸಾಹಿತಿಗಳು ತಮ್ಮ ಕೃತಿಗಳ ಮೂಲಕ ವಿವಿಧ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮೂಲಕ ತನ್ನ ಆಕ್ರೋಶ, ನೋವು–ನಲಿವುಗಳನ್ನು ವ್ಯಕ್ತಪಡಿಸುತ್ತಾನೆ.[1]

ಸಂಸ್ಕೃತಿಯು ಅಮೂರ್ತವಾದ ಒಂದು ಪರಿಕಲ್ಪನೆಯಾಗಿದ್ದು, ಅವರ ನಡವಳಿಕೆಗಳಲ್ಲಿ ಮಾತ್ರ ಮೂರ್ತರೂಪದಲ್ಲಿ ಗೋಚರಿಸುತ್ತವೆ. ಯಾವುದೇ ಒಂದು ಸಮುದಾಯದ ಸಮಸ್ತ ಜೀವನ ಕ್ರಮವನ್ನು ಸಂಸ್ಕೃತಿ ಒಳಗೊಂಡಿರುತ್ತದೆ. ಜೀವನದ ಭೌತಿಕ ವಸ್ತುಗಳಾದ ಉಡುಗೆ, ತೊಡುಗೆ, ಆಹಾರ ಪದ್ಧತಿ, ಸಂಪ್ರದಾಯಗಳು, ನಂಬಿಕೆ, ಆಚರಣೆ, ದೇವರು, ನೀತಿ ಆದರ್ಶ ಮೊದಲಾದವುಗಳು ಆ ಸಮುದಾಯದಲ್ಲಿ

***Please cite this article as:*** ಪುಷ್ಪಲತ. ಎಸ್. ಮತ್ತು ಪ್ರೊ. ಡಿ. ವಿ. ಪರಮಶಿವಮೂರ್ತಿ. (2022). ದಲಿತ ಆತ್ಮಕಥೆಗಳ ಸಾಂಸ್ಕೃತಿಕ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 28*–35.

ಕಂಡು ಬರುವ ಎಲ್ಲರು ಕೂಡ ಇದನ್ನು ಅಳವಡಿಸಿಕೊಂಡು ಜೀವನ ಸಾಗಿಸುತ್ತಾರೆ. ಭಾರತವು ಹಲವಾರು ರೀತಿಯ ಜನ ಸಮುದಾಯಗಳನ್ನು ಒಳಗೊಂಡಿರುವುದರಿಂದ ಇಲ್ಲಿ ಬಹು ಸಂಸ್ಕೃತಿಯು ಹಲವಾರು ರೀತಿಗಳಿಂದ ಕೂಡಿದ್ದು, ಪ್ರತಿಯೊಂದು ಕೂಡ ತನ್ನದೇ ಆದ ಮಹತ್ವವನ್ನು ಪಡೆದುಕೊಳ್ಳುತ್ತಾ ಬಂದಿದೆ. ಆದರೆ ಮೇಲುವರ್ಗದ ಜನರು ಕೆಳವರ್ಗದವರ ಮೇಲೆ ಹೇರಿರುವ ಯಜಮಾನ್ಯತೆ ಸಾಂಸ್ಕೃತಿಕ ಶ್ರೇಣೀಕರಣವನ್ನು ಹುಟ್ಟು ಹಾಕಿದೆ. ಇದರಿಂದ ಜನರಲ್ಲಿ ಮೇಲು–ಕೀಳು, ಪ್ರಧಾನ–ಅಧೀನ, ಶ್ರೇಷ್ಠ–ಕನಿಷ್ಠ, ಪ್ರಧಾನ–ಅಪ್ರಧಾನ, ಸರಿ–ತಪ್ಪು, ಹೆಚ್ಚು–ಕಡಿಮೆ ಮುಂತಾದ ಅಂಶಗಳಿರುವುದನ್ನು ಕಾಣಬಹುದು.

ದಲಿತ ಸಮುದಾಯದ ಜನರು ಬೇರೆ ಸಮುದಾಯದವರಿಂದ ಅಧಿಕಾರಸ್ಥ, ಬಲಯುತವಾದ ಯಜಮಾನ್ಯ ಸಂಸ್ಕೃತಿಗಳ ದೌರ್ಜನ್ಯ, ಅಪಮಾನ, ಅವಮಾನಗಳಿಗೆ ಒಳಗಾದರು ತಮ್ಮ ನೆಲ ಮೂಲದ ನಿಜವಾದ ಸಾಂಸ್ಕೃತಿಕ ಅಂಶಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಆಧುನಿಕ ಶಿಕ್ಷಣದ ಪ್ರಭಾವದಿಂದ ತಮ್ಮ ಮೂಲ ಪರಂಪರೆಯನ್ನು ಬೇರೆ ಬೇರೆ ಸಂಸ್ಕೃತಿಯೊಂದಿಗೆ ಸಂಧಾನಗೊಳಿಸಿ ತಮ್ಮ ಬದುಕಿನ ಏಳು ಬೀಳುಗಳ ಜೊತೆಗೆ ಅನೇಕ ಸಾಮಾಜಿಕ ಹೋರಾಟಗಾರರ, ಸಂತರ, ಚಳುವಳಿಗಾರರ, ಮಾರ್ಗದರ್ಶನಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಾಂಸ್ಕೃತಿಕತೆಯ ಅರಿವನ್ನು ದಲಿತ ಸಮುದಾಯದವರಲ್ಲಿ ಮೂಡಿಸುತ್ತಿದ್ದಾರೆ. ದಲಿತ ಆತ್ಮಕಥೆಗಳಲ್ಲಿ ದಲಿತ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ ನಡೆಸುತ್ತಿರುವುದನ್ನು ಸರ್ವರಿಗೂ ಮನಮುಟ್ಟುವ ಹಾಗೆ ವಸ್ತು, ಭಾಷೆ, ಶೈಲಿಯನ್ನು ದಲಿತ ಆತ್ಮಕಥೆಗಳಲ್ಲಿ ಕಾಣಬಹುದಾಗಿದೆ.

ದಲಿತ ಸಮುದಾಯದವರ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ದೇವರ ನಂಬಿಕೆಯಲ್ಲಿ ಕೂಡಿವೆ. ಇದು ಮೂಡನಂಬಿಕೆಯಿಂದ ಇರುವುದೋ ಅಥವಾ ಮುಗ್ಧತೆಯಿಂದ ಕೂಡಿರುವುದೋ ಎನ್ನುವ ಬದಲು ಅದು ಅವರ ಮಾನಸಿಕ ಭಾವನೆಗೆ ಸಂಬಂಧಿಸಿದ್ದು ಎಂದು ಹೇಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಲಕ್ಷ್ಮಣ್‌ರವರ ಸಂಬೋಳಿ ಎಂಬ ಆತ್ಮಕಥನದಲ್ಲಿನ ಕೆಲವು ಅಂಶಗಳನ್ನು ಇಲ್ಲಿ ಗಮನಿಸಬಹುದಾಗಿದೆ. ದಲಿತರ ಗುಟ್ಟೆಗೆ ಬೇಟೆಯಾಡಲು ಬಂದ ಕ್ರೈಸ್ತಧರ್ಮದವನು ಆಕಸ್ಮಿಕವಾಗಿ ಸಾಯುತ್ತಾನೆ. ಅವನನ್ನು ಆ ಗುಡ್ಡದಲ್ಲಿ ಸಮಾಧಿಗೊಳಿಸಿ ಆನಂತರ ಪ್ರತಿವರ್ಷ ದಿನದ ನೆನಪಿಗಾಗಿ ಆ ಜನ ಉತ್ಸವ ಮಾಡಲು ಬರುವುದು. ಅನಂತರ ದಾನ ಮಾಡುವುದು ಸಾಮಾನ್ಯವಾಗಿದೆ. ರೋಗ–ರುಜಿನಗಳು ಬಂದಾಗ ಅವುಗಳನ್ನು ನಿವಾರಿಸಲು ದೇವರಲ್ಲಿ ಹರಕೆ ಮಾಡುವುದು, ಪೂಜೆ ಸಲ್ಲಿಸುವುದು, ವ್ರತ ನಿಯಮಗಳನ್ನು ಅನುಸರಿಸುವುದು ಸಾಮಾನ್ಯವಾಗಿದೆ. ಅಷ್ಟೇ ಅಲ್ಲದೆ ಮಳೆ ಹೊರಟು ಹೋದಾಗ ಮಳೆ ಬರುವಂತೆ ನಡೆಸುವ ಆಚಾರ ವಿಚಾರಗಳು, ದೀಪಾವಳಿ ಹಬ್ಬ ಆಚರಿಸಲು ಸಾಮಾನು ತರಲು ಪಟ್ಟಣಕ್ಕೆ ಹೋಗಿ ಪೂರ್ವಿಕ ಹಿಂದಿರುಗಿ ಬಾರದೆ ಇದ್ದುದರಿಂದ ಆ ದುಃಖದ ನೆನಪಿಗಾಗಿ ಆ ಹಬ್ಬ ಆಚರಿಸದೆ ಇರುವುದು ಹೀಗೆ ಹಲವಾರು ಆಚರಣೆ, ಆಚಾರ–ವಿಚಾರಗಳನ್ನು ತಮ್ಮ ಕಥೆಯಲ್ಲಿ ಹೆಣೆದಿದ್ದಾರೆ. ನಂತರ ಹೊರಬೀಡು ಕೃತಿಯಲ್ಲಿ ಸಂಜೀವರಾಯಪ್ಪನವರು ತುಮಕೂರಿನ ಸುತ್ತಮುತ್ತಲ ಆಚರಣೆಗಳನ್ನು ತಿಳಿಸುತ್ತಾರೆ. ಇದರಲ್ಲಿ ಕದ್ರಿ ಹುಣ್ಣೇವು ಎಂಬುದು ದಲಿತರ ಪಾಲಿನ ವಿಶೇಷ ಆಚರಣೆ ಆಗಿತ್ತು. ಕೇವಲ ದಲಿತರು ಮಾತ್ರ ಆಚರಣೆ ಮಾಡುವ ಹಬ್ಬವಾಗಿತ್ತು ಉಳಿದ ಜಾತಿಯವರಾರು ಆಚರಿಸುತ್ತಿರಲಿಲ್ಲ. ಈ ಹಬ್ಬದಲ್ಲಿ ಎಲ್ಲಾ ದಲಿತರ ಮನೆಗಳು ಸುಣ್ಣ ಬಣ್ಣ ಕಾಣುತ್ತಿದ್ದವು. ಎಲ್ಲರ ಮನೆಯಲ್ಲಿ ಪಾಯಸ ಚಿತ್ರಾನ್ನ ರೆಡಿಯಾಗುತ್ತಿದ್ದಂತೆ

ಸಾಲುಸಾಲಾಗಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ಸುಮಾರು ಮಧ್ಯಾಹ್ನದ ಹೊತ್ತಿಗೆ ತೇರು ಎಳೆಯುವ ಹೊತ್ತಿಗೆ ಬೆಟ್ಟ ಸೇರುತ್ತಿದ್ದೆವು. ಅಲ್ಲಿಯೂ ಒಂದೇ ಒಗ್ಗಟ್ಟು ಎಲ್ಲರೂ ಒಂದೇ ಕಡೆ ನಿಂತು ದೂರದಿಂದ ತೇರನ್ನು ನೋಡುತ್ತಿದ್ದರು. ನಂತರ ದೇವಸ್ಥಾನದ ಒಳಗಡೆ ಪ್ರವೇಶ ಮಾಡದೆ ಹೊರಗೆ ನಿಂತು ಪೂಜೆ ಮಾಡಿಸಬೇಕಾಗಿತ್ತು. ಇದು ಇಲ್ಲಿನ ನಿಯಮವಾಗಿತ್ತು. ಇದು ಒಂದು ರೀತಿಯ ಅವಮಾನ ಅಪಮಾನವಾದರೂ ಕೂಡ ಯಾವುದೇ ರೀತಿಯ ಬೇಸರವಿಲ್ಲದೆ ದೇವರಿಗೆ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಇದನ್ನು ಯಥವತ್ತಾಗಿ ತಮ್ಮ ಆತ್ಮಕಥೆಯಲ್ಲಿ ಚಿತ್ರಿಸಿದ್ದಾರೆ.

ತುಂಬಾಡಿ ರಾಮಯ್ಯನವರು ತಮ್ಮ ಮಣೆಗಾರ ಕೃತಿಯಲ್ಲಿ ಹಬ್ಬಗಳ ರಂಗನ್ನು ಬಹಳ ವೈವಿದ್ಯಮಯವಾಗಿ ವರ್ಣಿಸಿದ್ದಾರೆ. ಅವರ ಸಮುದಾಯದಲ್ಲಿ ಆಚರಣೆ ಮಾಡುತ್ತಿದ್ದ ಹಬ್ಬಗಳೆಂದರೆ ಯುಗಾದಿ, ಮಹಾನವಮಿ, ಬಾಬಯ್ಯನ ಜಲ್ದಿ, ಆಂಜನೇಯ ಮತ್ತು ಮಾರಮ್ಮ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಿದ್ದರು. ಮಾರಮ್ಮ ಮತ್ತು ಬಾಬಯ್ಯನ ಹಬ್ಬ ವಿಶೇಷವಾಗಿತ್ತು. ಈ ಹಬ್ಬದ ದಿನಗಳಲ್ಲಿ ತಮ್ಮ ಊರು ತನ್ನೆಲ್ಲ ನೋವುಗಳನ್ನು ಮರೆತು ಸಂತೋಷದಿಂದ ಹಬ್ಬದಲ್ಲಿ ಮೈಮರೆಯುತ್ತಿದ್ದರು. ಮೊದಲನೇ ದಿನ ಆರತಿ ಮಾಡುವುದು, 2ನೇ ದಿನ ಕೋಣ ಕಡಿಯುವುದು, 3ನೇ ದಿನ ಬಾಡಿನ ಊಟ ನಡೆಯುತ್ತಿತ್ತು. ಮಾರಮ್ಮನ ಹಬ್ಬವನ್ನು ಮೂರು ವರ್ಷಗಳಿಗೊಮ್ಮೆ ಮಾಡುತ್ತಿದ್ದರು. ಇದು ಒಂದೇ ರಾತ್ರಿಗೆ ಮುಗಿದು ಹೋಗುತ್ತಿತ್ತು ಹಬ್ಬದ ಹದಿನೈದು ದಿನಕ್ಕೂ ಮೊದಲೇ ಊರಿನಲ್ಲಿ ಸಾರುವ ಕೆಲಸ ಮಣೆಗಾರರದ್ದೇ ಆಗಿರುತ್ತಿತ್ತು. ಇವರು ತಮಟೆ ಬಡಿಯುತ್ತಾ

***"ಕೊಂಬಿನ ಕುರಿ, ತೊಂಬಾಳೆ ಹಣ್ಣು***

***ನಾಳೆ ಮಂಗಳವಾರ ಮಾರಮ್ಮನಂತಪ್ಪೋ"***

ಎಂದು ಕೂಗುತ್ತಿದ್ದರು. ಮಾರಮ್ಮನಿಗೆ ಪೂಜೆ ಮಾಡುತ್ತಿದ್ದವರು ಮಡಿವಾಳ ಜಾತಿಗೆ ಸೇರಿದವರು ಊರ ಮಧ್ಯದಲ್ಲಿ ಹಬ್ಬದ ದಿನ ತಾತ್ಕಲಿಕವಾಗಿ ಗದ್ದುಗೆಯನ್ನು ನಿರ್ಮಿಸುತ್ತಿದ್ದರು. ಕುರುಬ ಜಾತಿಯಿಂದ ಬಾನ ಬರುತ್ತಿತ್ತು, 'ಬಾನ' ಹೊರುವವರು ಬರಿಮೈಯಲ್ಲಿ ಸೊಂಟಕ್ಕೆ ಪಂಚೆ ಬಿಗಿದು, ಬಾಯಿಗೆ ಬಟ್ಟೆ ಕಟ್ಟಿಕೊಂಡು ಬರುತ್ತಿದ್ದರು. ಘಟೆ ಮಣೆಗಾರರ ಮನೆಯಿಂದ ಬರುತ್ತಿತ್ತು. ಘಟೆಯಲ್ಲಿ ಹೆಂಡ ತುಂಬಿರುತ್ತಿದ್ದರು. ಬಾನ ಹೊರುವವರು ನೇಮದಿಂದಿರುವಷ್ಟೇ ಘಟೆ ಹೊರುವವರು ನೇಮದಿಂದಿದ್ದು ಅದರ ಪೂಜೆಯನ್ನು ಮಣೆಗಾರರೇ ಮಾಡಬೇಕಿತ್ತು. ಈ ಘಟೆಯನ್ನು ಗದ್ದುಗೆಗೆ ಸ್ವಲ್ಪ ದೂರದಲ್ಲಿ ಅದಕ್ಕೆ ಅಭಿಮುಖವಾಗಿ ಇಡುತ್ತಿದ್ದರು, ಘಟೆ ಇಳಿಸುವಾಗ ಅಪ್ಪಣೆ ಕೊಡಬೇಕು ಎಂದು ಅಲ್ಲಿ ನೆರೆದಿದ್ದ ಕುಲಸ್ಥರು ಅಪ್ಪಣೆ ಕೇಳುತ್ತಿದ್ದ ಪೂಜೆ ಮುಗಿದ ಮೇಲೆ ಮುಖ್ಯವಾಗಿ ಸರಗು ಹಾಕುವುದು ಶುರುವಾಗುತ್ತಿತ್ತು. ಸರಗು ಹಾಕುವುದೆಂದರೆ ಮಾರಮ್ಮನಿಗೆ ಕಡಿದಿದ್ದ ಕುರಿಯ ರಕ್ತ ಮತ್ತು ಅದರ ಕರುಳನ್ನು ಅನ್ನದೊಂದಿಗೆ ಬೆರಸಿ ಊರಿನ ನಾಲ್ಕು ದಿಕ್ಕಿಗೆ ಎರಚುವುದು ಹೀಗೆ ಸರಗು ಹಾಕುವುದರಿಂದ ಊರಿಗೆ ಕೇಡು ಬರುವುದಿಲ್ಲವೆಂಬ ನಂಬಿಕೆ 'ಸರಗು' ಹಾಕುವವರು ಲಂಗೋಟಿ ಒಂದನ್ನು ಬಿಟ್ಟು ಮೈಮೇಲೆ ಒಂದು ನೂಲಿನ ಎಳೆಯನ್ನು ಹಾಕುವಂತಿರಲಿಲ್ಲ. ಊರಿನ 4 ದಿಕ್ಕಿನ ಗಡಿಗಳನ್ನು ಸ್ವಲ್ಪ ಮೀರಿದರೂ 'ಸರಗು' ಹಾಕುವವರು ರಕ್ತಕಾರಿ ಸಾಯುತ್ತಾರೆಂಬ ನಂಬಿಕೆಯು ಇತ್ತು.

"ಇದಾದ ಮೇಲೆ ಮುಸ್ಲಿಮರು ಇಲ್ಲದಿದ್ದರು ಬಾಬಯ್ಯನ ಜಾತ್ರೆ ಮಾತ್ರ ಪ್ರತಿವರ್ಷ ನಡೆಯುತ್ತಿತ್ತು ಬಾಬಯ್ಯನ ಜಾತ್ರೆಯಲ್ಲಿ ಪೂಜೆ ಮಾಡುವುದಕ್ಕಾಗಿಯೇ ಅಕ್ಕಿರಾಂಪುರದಿಂದ ಬಂದು ಮುಸ್ಲಿಂ ಕುಟುಂಬ ಬಂದು ನಮ್ಮೂರಿನಲ್ಲಿ ಕೆಲದಿನಗಳವರೆಗೆ ತಾತ್ಕಲಿಕವಾಗಿ ನೆಲೆಸುತ್ತಿದ್ದರು. ಊರಿನ ಜನ ಯಾವುದೇ ಭೇದ ಭಾವಗಳಿರದೆ, ತಮ್ಮದೇ ಹಬ್ಬವೆನ್ನುವಂತೆ ಬಾಬಯ್ಯನ ಜಾತ್ರೆಯನ್ನು ಸಂತೋಷದಿಂದ ಏಳು ದಿನಗಳವರೆಗೆ ಆಚರಿಸುತ್ತಿದ್ದರು. ಊರ ಮಧ್ಯದಲ್ಲಾದ್ದ ಚಾವಡಿಯ ಬಾಬಯ್ಯನ ದೇವಸ್ಥಾನ ಬೆಳ್ಳಿಯಿಂದ ಮಾಡಿದ ದೇವರುಗಳನ್ನು ಬಟ್ಟೆಯಲ್ಲಿ ಸುತ್ತಿ ಅವನ್ನೆಲ್ಲಾ ಒಂದು ಹಳೆ ಪೆಟ್ಟಿಗೆಯಲ್ಲಿಟ್ಟು, ಚಾವಡಿಯ ಮೂಲೆಯೊಂದರಲ್ಲಿ ಕಟ್ಟುತ್ತಿದ್ದರು. ಚಾವಡಿಗೆ ಬಾಗಿಲು ಬೀಗ ಏನು ಇರುತ್ತಿರಲಿಲ್ಲ. ಬಾಬಯ್ಯನ ಜಾತ್ರೆ ಏಳು ದಿನಗಳ ಕಾಲ ನಡೆಯುತ್ತಿತ್ತು.

ಬಾಬಯ್ಯನ ಜಾತ್ರೆ ನಡೆಯುತ್ತಿದ್ದ ಏಳು ದಿವಸಗಳಲ್ಲಿ ಊರಿನಲ್ಲಿ ಯಾರ ಮನೆಯಲ್ಲಿಯು ಹಂದಿ ಮಾಂಸವನ್ನು ಬೇಯಿಸುವಂತಿರಲಿಲ್ಲ ಹಾಗೂ ಊರಿನ ಒಳಕ್ಕೆ ಯಾವ ಹಂದಿಯು ಪ್ರವೇಶ ಮಾಡುವಂತಿಲ್ಲ ಅದು ಅವರ ನಂಬಿಕೆ ಯಾಗಿತ್ತು. ಹೀಗೆ ಪ್ರತಿಯೊಂದು ಹಳ್ಳಿಯಲ್ಲಿ ವಿವಿಧ ರೀತಿಯ–ಆಚರಣೆಗಳು ಜಾರಿಯಲ್ಲಿರುವುದನ್ನು ನಾವು ಕಾಣಬಹುದು.

ಊರ ಚಾಕರಿ ಮಾಡಬೇಕಾದರೆ ತಮಟೆ ಬಡಿಯುವುದನ್ನು ಕಡ್ಡಾಯವಾಗಿ ಕಲಿತಿರಬೇಕಿತ್ತು. ತಮಟೆ ಬಡಿಯುವುದು ನಮ್ಮ ಮಣೆಗಾರರಿಗೆ ವಂಶ ಪಾರಂಪರ್ಯವಾಗಿ ಬಂದ ಕಲೆ, ಸತ್ತ ದನಗಳನ್ನು ಹಟ್ಟಿಗೆ ತಂದು ಅದರ ಚರ್ಮವನ್ನು ತೆಗೆದು ಅದರ ತೆಳುವಾದ ಚರ್ಮವನ್ನು ಹೊರತೆಗೆದು ಅದನ್ನು ಒಡೆದು ಹೋದ ಮಡಕೆಯ ಕಂಠಕ್ಕೆ ಬಿಗಿದುಕಟ್ಟಿ ಬಿಸಿಲಲ್ಲಿ ಒಣಗಿಸಿ ಕಡ್ಡಿಯಿಂದ ಭಾರಿಸಿದರೆ ತಮಟೆ ಬಡಿದ ಶಬ್ಧ ಬರುತ್ತಿತ್ತು. ತಮಟೆ ಬಡಿಯುವುದು ಒಂದು ಕಲೆ, ತಮಟೆ ಬಡಿಯುವವನಿಗೆ ಲೋಕದ ಎಲ್ಲ ವಸ್ತುಗಳು ಕರಗಿ ಹೋಗಿ, ಕೇವಲ ತಮಟೆ ಮತ್ತು ಅದರ ಲಯ ಮಾತ್ರ ಅವನ ಪ್ರಜ್ಞೆಯಲ್ಲಿರುತ್ತದೆ. ಬೇರೆ ಬೇರೆ ಸನ್ನಿವೇಶಗಳಿಗೆ ಬೇರೆ ಬೇರೆ ಗಸ್ತಿಗಳನ್ನು ಹಾಕಬೇಕು ಅವುಗಳೆಂದರೆ ಹನುಮಂತರಾಯನ ಗಸ್ತಿ, ಮಾರಮ್ಮನ ಗಸ್ತಿ, ಮುಂತಾದವುಗಳಿವೆ. ಹೀಗೆ ತಮಟೆ ಬಡಿಯುವುದು ಕೂಡ ದಲಿತ ಸಮುದಾಯದವರದು, ಕಲೆಯು ಹೌದು. ಹಾಗೆಯೇ ತಮ್ಮ ಸಾಂಸ್ಕೃತಿಕತೆಯನ್ನು ಹಿಂದಿನಿಂದ ಇಲ್ಲಿಯವರೆಗೂ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ದೇವರನ್ನು ನಂಬುವುದು ದಲಿತಾನುಭವದ ಒಂದು ಬಗೆಯದಾದರೆ, ದೇವರನ್ನು ನಂಬಿಸಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಿದ್ದ ಪೌರೋಹಿತ್ಯದ ಮುಖಗಳನ್ನು ದಲಿತ ಆತ್ಮಕಥನಕಾರರು ಬಿಚ್ಚಿಟ್ಟಿದ್ದಾರೆ. ಅದರಂತೆ ಸಿದ್ಧಲಿಂಗಯ್ಯ ಅವರು ತಮ್ಮ 'ಊರುಕೇರಿ'ಯಲ್ಲಿ ಪಕ್ಕದ ಊರಿನಲ್ಲಿ ಒಬ್ಬನ ಮೇಲೆ ಒಂದು ದೇವತೆ ಮೈದುಂಬುತಿತ್ತು. ಜನ ಅದನ್ನು 'ಕುರಿದೇವ್ರು' ಎಂದು ಕರೆಯುತ್ತಿದ್ದರು. ದೇವತೆ ಮೈದುಂಬಿದ ಕೂಡಲೇ 'ಕುರಿ ಕುರಿ' ಎಂದು ಆರ್ಭಟಿಸುತ್ತಿತ್ತು. ಭಕ್ತರು ಭಯದಿಂದ 'ಯಾರ ಕುರಿ ತಾಯಿ?' ಎಂದು ಕೇಳುತ್ತಿದ್ದರು. ಆಗ ದೇವತೆ 'ಯಾವುದಾದರೂ ಒಂದು ಕುರಿ' ಎನ್ನುತ್ತಿತ್ತು. ಭಕ್ತರು ಓಡಿ ಹೋಗಿ ಸಿಕ್ಕಿದ ಕುರಿಯನ್ನು ಹಿಡಿದು ದೇವತೆಯ ಮುಂದೆ ನಿಲ್ಲಿಸುತ್ತಿದ್ದರು. ದೇವತೆ ಮೈಯಿಳಿದ ನಂತರ ಪೂಜಾರಿ ಮತ್ತು ಭಕ್ತರು ಕುರಿಕೊಯ್ದು ಅಡುಗೆ ಮಾಡಿ ಊಟಮಾಡುತ್ತಿದ್ದರು. ಕುರಿ ಕಳೆದುಕೊಂಡವರು ಏನೂ ಅನ್ನುವಂತೆಯೂ ಇಲ್ಲ. ಅನುಭವಿಸುವಂತೆಯೂ ಇಲ್ಲ. ಏನಾದರು ಮಾತಾಡಿದರೆ ದೇವತೆ ಕೇಡು ಮಾಡಿತು

ಎಂಬ ಭಯ. ಮತ್ತೊಮ್ಮೆ ದೇವತೆ ಮೈದುಂಬಿ ಕುರಿ ಎಂದು ಕೂಗುತ್ತಿದ್ದ. ಒಮ್ಮೆ ಭಕ್ತರು ಯಥಾ ಪ್ರಕಾರ ಹತ್ತಿರದಲ್ಲಿ ಸಿಕ್ಕಿದ ಕುರಿಯನ್ನು ಹಿಡಿದು ತರುತ್ತಾರೆ. ಯಾಕೋ ದೇವತೆ ಈ ಕುರಿ ನನಗೆ ಬೇಡ, ಬೇರೆ ಕುರಿ ತನ್ನಿ ಎನ್ನುತ್ತದೆ. ದೇವತೆ ಹೀಗೆ ಹೇಳಿದ್ದು ಇದೇ ಮೊದಲ ಸಲ. ಜನ ಚಕಿತಗೊಂಡರು ತಮ್ಮಿಂದ ತಪ್ಪೇನಾದರೂ ಆಗಿರಬಹುದೇ ಎಂದು ಚಿಂತಿಸಿದರು. 'ಯಾಕೆ ಬೇಡ ತಾಯಿ' ಎಂದು ದೈನ್ಯದಿಂದ ಕೇಳಿದರು, ಸ್ವೀಕರಿಸುವಂತೆ ಪರಿಪರಿಯಾಗಿ ಬೇಡಿದರು. ದೇವರು ಯಾವುದಕ್ಕೂ ಜಗ್ಗಲಿಲ್ಲ. 'ಕುರಿ ಬೇಡ ಅಂದರೆ ಬೇಡ' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿತು. ಸಮಸ್ಯೆ ಬಗೆ ಹರಿಯಲಿಲ್ಲ. ಸಿದ್ಧಲಿಂಗಯ್ಯ ಅವರ ಮಾವ ಕುರಿಯನ್ನು ಗುರುತಿಸಿ ಊರಿನವರನ್ನು ಕುರಿತು 'ಈ ಕುರಿ ದೇವತೆ ಮೈದುಂಬಿದ ಪೂಜಾರಪ್ಪನದು' ಎನ್ನುತ್ತಾರೆ. ಇದು ಪೂಜಾರಿಯ ಕುರಿ ಆದ್ದರಿಂದ ಬೇಡ ಎನ್ನುತ್ತಿದ್ದಾನೆ ಎಂದು ಜನಕ್ಕೆ ಮನವರಿಕೆಯಾಯಿತು. ದೇವರು ಮೈದುಂಬುವುದು ಕುರಿ ತಿನ್ನಲು ಮಾಡುವ ನಾಟಕ ಎಂದು ಗೊತ್ತಾಯಿತು. ಹಿಂದೆ ಕುರಿ ಕಳೆದುಕೊಂಡಿದ್ದವರ ಕೋಪ ನೆತ್ತಿಗೇರಿತು. ಜನ ದೇವತೆ ಮೈದುಂಬುತ್ತಿದ್ದವನನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದರು. ಅಂದಿನಿಂದ ಕುರಿದೇವರ ಕಾಟ ತಪ್ಪುತ್ತದೆ.[2] ಈ ಬಗೆಯಲ್ಲಿ ದಲಿತರು ದಲಿತರನ್ನೇ ದೇವರ ಹೆಸರಿನ ನಂಬಿಕೆಯಲ್ಲಿ ಹೇಗೆ ಮೋಸ ಮಾಡುತ್ತಾರೆ ಎಂಬುದನ್ನು ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

ಮೇಲಿನ ಉದಾಹರಣೆಗಳಷ್ಟೇ ಅಲ್ಲದೆ ಸಂಪ್ರದಾಯದ ಹೆಸರಿನಲ್ಲಿ ಇನ್ನು ಬೇರೆ ಬೇರೆ ರೀತಿಯ ಭಿನ್ನ ಸ್ವರೂಪದ ಅನಿಷ್ಠ ಪದ್ಧತಿಗಳನ್ನು ಕಾಣಬಹುದು. ಮೇಲ್ವರ್ಗದ ಸಮುದಾಯದ ಜನರು ದಲಿತ ಹೆಣ್ಣು ಮಕ್ಕಳನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಶೋಷಣೆ ಮಾಡುವ ನೆಪದಿಂದ ಕೆಲವೊಂದು ಅನಿಷ್ಠ ಆಚರಣೆಗಳನ್ನು ಆಚರಿಸುತ್ತಾರೆ. ದಲಿತರ ಕೇರಿಗೂ ಹಾಗೂ ಊರೊಳಗಿನ ಸಂಪ್ರದಾಯಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿರುವುದನ್ನು ಕಾಣಬಹುದು. ಈ ಸಂಬಂಧಗಳು ದಲಿತರಿಗೆ ಮಾರಕವಾಗಿದ್ದರೂ ಸಹ ಸಂಪ್ರದಾಯದ ಆಚರಣೆಯ ಹೆಸರಿನಲ್ಲಿ ದಲಿತ ಮಹಿಳೆಯನ್ನು ಶೋಷಿಸುತ್ತಿದ್ದರು ಎಂಬುದನ್ನು ಸಮತಾ ದೇಶಮಾನೆಯವರು ತಮ್ಮ ಕೃತಿಯಾದ ಒಡಲಿನ ಬೆಂಕಿಯಲ್ಲಿ ದಾಖಲಿಸಿದ್ದಾರೆ. "ದಲಿತ ಹೆಂಗಸರು ಕುಪ್ಪಸವನ್ನು ಕಳೆದು ಅಂಡುಗಚ್ಚೆ ಹಾಕಿ ಸೀರೆಯನ್ನು ಉಟ್ಟಿರಬೇಕು. ಅಂದರೆ ನಡುಭಾಗಕ್ಕೆ ಮಾತ್ರ ಸೀರೆ ಸುತ್ತಿದ್ದು, ಸೆರಗು ತಲೆಮೇಲೆ ಬಂದಿರುತ್ತದೆ. ಇವರ ಕೈಯಲ್ಲಿ ನೀಳವಾದ ಮಾರುದ್ದದ ಲಕ್ಕಿಯ ಹತ್ತಾರು ಜಬರಿಗಳಿರುತ್ತವೆ ಇವರ ವಿರುದ್ಧ ಇನ್ನೊಂದು ಬಣ್ಣದಲ್ಲಿ ದಲಿತೇತರ ಹಾಗೂ ಬ್ರಾಹ್ಮಣೇತರರಿಂದ ಕೂಡಿದ ಗಂಡಸರು ಮಾತ್ರ ಇರುತ್ತಿದ್ದು, ಅಂಡಗಚ್ಚೆ ಹಾಕಿದ ಧೋತಿಯನ್ನು ಉಟ್ಟಿರುತ್ತಾರೆ. ಕೈಯಲ್ಲಿ ಅಥವಾ ಸರೆಯಿಂದ ಲೇಪಿತವಾದ ಜೋಳಿಗೆ ಇರುತ್ತದೆ. ಗಂಡಸರಲ್ಲಿ ಸಾಮಾನ್ಯವಾಗಿ ಊರ ಪ್ರಮುಖರು ಹಾಗೂ ಪುಂಡ ಹುಡುಗರು ಹೆಚ್ಚು ಇರುತ್ತಾರೆ. ಸಂಪ್ರದಾಯದ ಹೆಸರಿನಿಂದ ದಲಿತ ಮಹಿಳೆಯರಿಗೆ ಎಲ್ಲೆಂದರಲ್ಲಿ ಮುಟ್ಟುವ ಅವಕಾಶಕ್ಕಾಗಿ ಅವರು ಈ ಆಟ ಏರ್ಪಡಿಸುತ್ತಾರೆ. ದೇವಾಲಯದ ಎದುರು ಹೊಂಡಗಳ ಸುತ್ತಮುತ್ತಲು ಕ್ರೀಡೆಯಾಗಿ ನಡೆಯುವುದು ಓಕುಳಿ ಗಂಡಸರು ಅರಿಶಿನ ಕುಂಕುಮಗಳಿಂದ ಕೂಡಿದ ಹೊಂಡದ ನೀರು ಜೋಳಿಗೆಯಲ್ಲಿ ತಂದು ಹೆಂಗಸರಿಗೆ ಹೊಡೆಯುತ್ತಾರೆ. ಕೈಯಲ್ಲಿ ನೀಳವಾದ ಜಬರಿಯನ್ನು ಹಿಡಿದು ನಿಂತ ಹೆಂಗಸರು ಈ ನೀರಿನ

ಹೊಡೆತದಿಂದ ತಪ್ಪಿಸಿಕೊಂಡು ಜಬರಿಯಿಂದ ಗಂಡು ಗಂಡುಗಳಿಗೆ ಹೊಡೆಯಬೇಕು ಇದು ಪದ್ಧತಿಯಾಗಿದೆ"[3]

ಈ ಮೇಲಿನ ಆಚರಣೆಯನ್ನು ಗಮನಿಸಿದಾಗ ಮೇಲು ವರ್ಗದ ಜನರಿಗೆ ದಲಿತ ಹೆಣ್ಣು ಮಕ್ಕಳ ಮೈಮಾಟವನ್ನು ಕಣ್ಣಿನ ತುಂಬ ನೋಡಿ ಅನುಭವಿಸಲು ಆಚರಿಸಿಕೊಂಡು ಬರುತ್ತಿರುವ ಅನಿಷ್ಠ ಪದ್ದತಿ ಎಂಬುದು ಗೋಚರವಾಗುತ್ತದೆ.

ಸವದತ್ತಿ ಮತ್ತು ಕಲ್ಬುರ್ಗಿಯ ಸುತ್ತಮುತ್ತ ದಲಿತ ಹೆಂಗಸರು ಬೇವಿನ ಸೊಪ್ಪಿನ ಉಡುಗೆ, ಗಂಧದ ಉಡುಗೆಯನ್ನು ಧರಿಸುವ ಅನಿಷ್ಠ ಪದ್ದತಿ ಆಚರಣೆಯಲ್ಲಿದೆ ಮೇಲು ಜಾತಿಯವರು ದೌರ್ಜನ್ಯದ ಬಹಿರಂಗದ ಕುಕೃತ್ಯವಾಗಿ ಇದು ರೂಪುಗೊಂಡಿದೆ. ಸಂಪ್ರದಾಯದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ಆಚರಣೆಗಳನ್ನು ನಡೆಸುತ್ತಾ ದಲಿತ ಮಹಿಳೆಯರನ್ನು ಬೆತ್ತಲೆಯಾಗಿ ನೋಡಿ ಆನಂದಿಸುವ ಕ್ರೂರ ಮನಸ್ಥಿತಿಯನ್ನು ಕಾಣಬಹುದು. ಇಂದಿಗೂ ಈ ಅನಿಷ್ಠ ಪದ್ಧತಿಗಳು ಕಣ್ಣಿಗೆ ಕಾಣದಂತೆ ಆಚರಣೆಯಲ್ಲಿವೆ. ಇಂತಹ ಅನಿಷ್ಠ ಪದ್ಧತಿಗಳಿಂದ ದಲಿತ ಸ್ತ್ರೀಯರು ಜಾಗೃತರಾಗಬೇಕಾಗಿದೆ. ಜೊತೆಗೆ ಇಂತಹ ಪದ್ಧತಿಗಳಿಂದ ಬಿಡುಗಡೆ ಪಡೆಯಬೇಕಾಗಿದೆ. ಹೀಗೆ ದಲಿತ ಸಮಾಜದಲ್ಲಿ ಇಂತಹ ನಂಬಿಕೆಗಳಿಗಿಂತ ಭಿನ್ನವಾಗಿ ಆಧುನಿಕ ಸಂದರ್ಭದಲ್ಲಿ ತಳ ಸಮುದಾಯದ ಜನರು ದೇವರ ಮೌಢ್ಯತೆಗೆ ಒಳಗಾಗಿ ದೇವರ ಹೆಸರಲ್ಲಿ ತಮ್ಮನ್ನು ಶೋಷಿಸುತ್ತಿರುವ ಹಾಗೂ ವಂಚಿಸುತ್ತಿರುವ ಸಂಗತಿಗಳನ್ನು ತಮ್ಮ ಅನುಭವದ ಸತ್ಯಗಳಿಂದ ದಲಿತ ಆತ್ಮಕಥನಕಾರರು ನಿರೂಪಿಸಿದ್ದಾರೆ.

ಇಂತಹ ಸಾಂಸ್ಕೃತಿಕ ದೌರ್ಜನ್ಯಕ್ಕೆ ದಲಿತ ಸಮುದಾಯದಲ್ಲಿರುವ ಅನಕ್ಷರತೆ ಅಜ್ಞಾನ ಮೂಢನಂಬಿಕೆಗಳೇ ಕಾರಣ ಇದು ಮೇಲು ಜಾತಿಗಳ ಹುನ್ನಾರವಾಗಿದೆ. ಅನಕ್ಷರತೆ ದಲಿತರಲ್ಲಿ ಹೆಚ್ಚಾಗಿರುವುದರಿಂದ ಮತ್ತು ಅಕ್ಷರಸ್ಥ ಕೆಲವು ದಲಿತರಲ್ಲಿ ಇನ್ನು ದೈವಭಯ ಮತ್ತು ದ್ವಂದ್ವದ ಅರಿವು ಇರುವುದರಿಂದ ಯಾವುದು ತಪ್ಪು ಯಾವುದು ಸರಿ ಎಂದು ನಿರ್ಧಾರ ಮಾಡುವಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಇಂತಹ ಕೆಟ್ಟ ಪದ್ಧತಿಗಳಿಗೆ ದಲಿತ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ. ದಲಿತ ಸಮುದಾಯದವರ ನಂಬಿಕೆಗಳು ಮತ್ತು ಆಚರಣೆಗಳು ಒಂದು ಬಗೆಯ ವೈಜ್ಞಾನಿಕ ನಿಲುವುಗಳನ್ನು ಒಳಗೊಂಡಿದ್ದರೆ, ದಲಿತೇತರರು ದಲಿತರನ್ನು ಕುರಿತು ಇಟ್ಟು ಕೊಂಡಿರುವ ನಂಬಿಕೆಗಳು ಅಮಾನವೀಯ ಕ್ರೂರ ತನಕ್ಕೆ ಸಾಕ್ಷಿಯಾಗಿ ಕಂಡುಬರುತ್ತವೆ.

ಭಾರತೀಯ ಸಮಾಜದಲ್ಲಿ ಇಂದಿಗೂ ಪ್ರಜ್ಞಾವಸ್ಥೆಯಲ್ಲಿರುವ ಶೋಷಣೆ ಅರೆ ಪ್ರಜ್ಞಾವಸ್ಥೆಯಲ್ಲಿರುವ ಅಸ್ಪೃಶ್ಯತೆಯ ನೋವು ಅಮೇರಿಕಾದ ಕಪ್ಪು ಜನರ ಮೇಲೆ ನಡೆಯುತ್ತಿರುವ ಜನಾಂಗವರು ಶೋಷಣೆಗಿಂತ ಭೀಕರವಾಗಿದೆ. ಸಂಪ್ರದಾಯ ನಂಬಿಕೆ, ಆಚರಣೆಯ ಹೆಸರಿನಲ್ಲಿ ಮೇಲ್ವರ್ಗದ ಪುರುಷರು ಕೆಳವರ್ಗದ ಅದರಲ್ಲೂ ದಲಿತ ಸ್ತ್ರೀಯರ ಜೊತೆ ನಡೆಸುವ ಆಚರಣೆಗಳು ಒಂದು ರೀತಿಯ ಸಾಂಸ್ಕೃತಿಕ ಶೋಷಣೆಯೇ ಸರಿ ಇಂತಹ ಶೋಷಣೆಯನ್ನು ಸಮರ್ಥಿಸಿಕೊಳ್ಳುವ ಬಗ್ಗೆ ಪ್ರತಿ ವರ್ಷ ಈ ಆಚರಣೆಗಳು ನಡೆಯಲೇಬೇಕೆಂಬ ನಿಯಮ, ನಡೆಸದಿದ್ದರೆ ಊರಿಗೆ ಮಳೆ ಬರಲಾರದು. ಬೆಳೆಗೆ ರೋಗ ಬರುತ್ತದೆ. ಊರಿಗೆ ಮಾರಿ ವಕ್ಕರಿಸುತ್ತದೆ. ರೋಗರುಜಿನಗಳು, ಬರಗಾಲ ಬರುತ್ತದೆ ಎಂಬ ನಂಬಿಕೆಗಳಿಗೆ ಹೆದರುವ

ದಲಿತ ಹೆಂಗಸರು ಮತ್ತು ಗಂಡಸರು ಸಂಪ್ರದಾಯ, ಆಚರಣೆ, ಮೂಡನಂಬಿಕೆಗಳ ಹೆಸರಿನಲ್ಲಿ ಮನರಂಜನೆಗೆ ಬಲಿಯಾಗುತ್ತಿರುವುದನ್ನು ನಾವು ಇತ್ತೀಚಿನ ದಿನಗಳಲ್ಲೂ ಸಹ ಕಾಣಬಹುದಾಗಿದೆ.

ಪ್ರಸ್ತುತ ಸಂದರ್ಭದ ಅಂಶಗಳನ್ನು ಗಮನಿಸಿದಾಗ 'ಸಂಸ್ಕೃತಿ' ಎಂದರೆ ಮೊದಲು ಬರುವುದು ಆಚರಣೆ, ಸಂಪ್ರದಾಯ, ನಂಬಿಕೆ ಮತ್ತು ನಡವಳಿಕೆಗಳು ಇವು ಹೆಚ್ಚಾಗಿ ಕಂಡು ಬರುವುದು ನಾವು ಆಚರಿಸುವಂತಹ ಹಬ್ಬ ಹರಿದಿನ, ಜಾತ್ರೆಗಳು, ವ್ರತಗಳು ಇಂತಹ ಸಂದರ್ಭದಲ್ಲಿ ಪೂರ್ವ ಅಂದರೆ ಹಿಂದಿನಿಂದ ನಡೆದು ಬಂದಿರುವ ಸಾಂಸ್ಕೃತಿಕ ರೀತಿ, ನೀತಿ, ನಂಬಿಕೆ ಆಚರಣೆಗಳನ್ನು ಮುಂದುವರಿಸುವ ಉದ್ದೇಶದಿಂದ ನಡೆಯುತ್ತಿವೆ. ಪ್ರತಿಯೊಂದು ಸಂಸಕೃತಿಗೂ ಅದರದೇ ಆದ ಸಂಪ್ರದಾಯ, ಆಚರಣೆ, ರೀತಿ, ನೀತಿ ನಂಬಿಕೆ–ನಡವಳಿಕೆಗಳು ಇರುತ್ತವೆ. ಯಾವುದೇ ಒಂದು ಸಂಸ್ಕೃತಿಯು ತಂತಾನೆ ಶ್ರೇಷ್ಠವು ಅಲ್ಲ, ಕನಿಷ್ಠವು ಅಲ್ಲ, ತನ್ನದೇ ಆದ ಅಸ್ಮಿತೆ ಮತ್ತು ಅನನ್ಯತೆಯನ್ನು ಸಾಧಿಸಿ ಕೊಂಡಿರುತ್ತದೆ. ಸಾಂಸ್ಕೃತಿಕ ಯಜಮಾನ್ಯರ ಹುನ್ನಾರದಿಂದ ಕೆಲವರ್ಗದ ಸಾಂಸ್ಕೃತಿಕ ನಿಲುವುಗಳನ್ನು ಮೇಲು ಕೀಳುಗಳು ಮಾಡಿ ಅದರ ಅಸ್ಮಿತೆಯನ್ನು ಹೋಗಲಾಡಿಸುತ್ತಾರೆ. ಈ ಬಗೆಯ ಸಂಸ್ಕೃತಿಯ ನೆಲೆಗಳನ್ನು ಕನ್ನಡ ದಲಿತ ಆತ್ಮಕಥನಕಾರರು ಸೂಕ್ಷ್ಮವಾಗಿ ಗ್ರಹಿಸಿ ತಮ್ಮ ಬರಹಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ತಮ್ಮ ಬದುಕಿನಲ್ಲಿ ತಾವುಗಳು ಅನುಭವಿಸಿದ ಸಾಂಸ್ಕೃತಿಕ ಯಜಮಾನ್ಯರ ಸಂಗತಿಗಳನ್ನು ನಿರ್ಭಿತಿಯಿಂದ ನಿರೂಪಿಸಿದ್ದಾರೆ. ಸಾಂಸ್ಕೃತಿಕ ನಂಬಿಕೆ ಮತ್ತು ಆಚರಣೆಗಳ ಮೂಲ ಬೇರುಗಳನ್ನು ಹಿಡಿದು ವರ್ತಮಾನ ವಾಸ್ತವಗಳೊಂದಿಗೆ ಮಾನವೀಯ ನೆಲೆಯಲ್ಲಿ ಎತ್ತಿ ಹಿಡಿದಿದ್ದಾರೆ. ದಲಿತರು ತಮ್ಮ ಸಮುದಾಯದ ಪರಂಪರೆಯ ಭಾಗವಾಗಿ ಅನುಸರಿಸಿ ಅನುಭವಿಸಿದ ಸಂಸ್ಕೃತಿಗಳು ಅನೇಕ. ಈ ಸಂಸ್ಕೃತಿಯ ಪ್ರತಿಬಿಂಬವಾಗಿ ಹಬ್ಬ ಹರಿದಿನಗಳು ಪ್ರಚಲಿತದಲ್ಲಿವೆ ಇದಲ್ಲದೆ ಇವರು ಹೇಗೆ ತಮ್ಮ ಸಾಂಸ್ಕೃತಿಕ ನೆಲಮೂಲ ಸಂಸ್ಕೃತಿಗಳನ್ನು ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಕಾಣಬಹುದಾಗಿದೆ.

**ಉಪಸಂಹಾರ**

ಆಧುನಿಕ ಸಮಾಜದಲ್ಲಿ ದಲಿತ ಸಮುದಾಯಗಳು ತಮ್ಮದೇ ಆದ ಪರಂಪರಾಗತ ಸಾಂಸ್ಕೃತಿಕ ನಂಬಿಕೆಗಳು ಮತ್ತು ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ನಂಬಿಕೆ ಮತ್ತು ಆಚರಣೆಗಳು ಇವರ ಮನಸ್ಥಿತಿಗೆ ಹೇಗೆ ಸ್ಪಂದಿಸುತ್ತವೆ ಎಂಬುವುದು ಬಹಳ ಸ್ಪಷ್ಟವಾದ ವಿಚಾರಗಳಿಂದ ಪರಂಪರೆಯ ನಂಬಿಕೆ ಮತ್ತು ಆಚರಣೆಗಳನ್ನು ಉಳಿಸಿ ಬೆಳಸಿಕೊಳ್ಳುವ ಸಾಂಸ್ಕೃತಿಕಕ ಹೊಣೆಗಾರಿಕೆ ಇವರ ಮೇಲಿರುತ್ತದೆ. ಇದಲ್ಲದೆ ಇವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಸಾಧನಗಳಾಗಿ ಹಾಗೂ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ.

**ಅಡಿ ಟಿಪ್ಪಣಿಗಳು**

1. ಸಿದ್ರಾಮ ಕಾರಣಿಕ. ದಲಿತ ಬಂಡಾಯ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ಪು.19.
2. ಸಿದ್ಧಲಿಂಗಯ್ಯ. ಊರುಕೇರಿ ಪು.33.
3. ಹೊಂಬಯ್ಯ. ದಲಿತ ಆತ್ಮಕಥೆಗಳ ಅಧ್ಯಯನ. ಪು.231.

**ಪರಮರ್ಶನ ಗ್ರಂಥಗಳು**


- ಹೊಂಬಯ್ಯ. (2017). ಕನ್ನಡ ದಲಿತ ಆತ್ಮಕಥೆಗಳು. ರಚನಾ ಪ್ರಕಾಶನ, ಮೈಸೂರು.
- ಸಿದ್ರಾಮ ಕಾರಣಿಕ. (2010). ದಲಿತ ಬಂಡಾಯ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ, ಜ್ಯೋತಿ ಪ್ರಕಾಶನ (ಸಂಶೋಧನ ಗ್ರಂಥ). ಮೈಸೂರು.
- ತುಂಬಾಡಿ ರಾಮಯ್ಯ. (1999). ಮಣೆಗಾರ. ತಂಬಾಡಿ ಸಾಹಿತಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್. ಮೈಸೂರು.
- ಸಿದ್ಧಲಿಂಗಯ್ಯ. (1997). ಊರುಕೇರಿ. ಅಂಕಿತ ಪುಸ್ತಕ ಪ್ರಕಾಶನ.
- ಸಂಜೀವರಾಯ ಜಿ. (2011). ಹೊರಬೀಡು. ಕ್ರಾಂತಿ ಸಿರಿ ಪ್ರಕಾಶನ, ಬೆಂಗಳೂರು.